**ಮಗ:** ಅಮ್ಮಾ, ದೇವರು ನಮ್ಮನ್ನು ಸೃಷ್ಟಿ ಮಾಡಿದ ಅಂತ ನೀನು ಹೇಳಿದ್ದೆ. ಆದರೆ ಅಪ್ಪ ಹೇಳ್ತಾರೆ ಮಂಗನಿಂದ ಮಾನವ ಅಂತ. ಯಾವುದು ನಿಜ?
**ತಾಯಿ:** ಓ ಅದಾ... ನಾನು ನನ್ನ ಕಡೆಯವರ ಬಗ್ಗೆ ಹೇಳಿದ್ದೆ. ನಿನ್ನ ಅಪ್ಪ ಅವರ ಕಡೆಯವರ ಬಗ್ಗೆ ಹೇಳಿದ್ದಾರೆ ಅಷ್ಟೆ!

***

**ಶಿಕ್ಷಕ:** ಗುಂಡ, ಯಾವ ಪಕ್ಷಿ ಅತಿ ವೇಗವಾಗಿ ಹಾರುತ್ತೆ?
**ಗುಂಡ:** ಆನೆ ಸರ್.
**ಶಿಕ್ಷಕ:** ಮೂರ್ಖ! ನಿನ್ನ ತಂದೆ ಏನು ಮಾಡುತ್ತಾರೆ?
**ಗುಂಡ:** ಅವರು ರೌಡಿಗಳ ಗುಂಪಿಗೆ ಲೀಡರ್.
**ಶಿಕ್ಷಕ:** ಹೌದಾ? ವೆರಿ ಗುಡ್ ನೀನು ಹೇಳಿದ ಉತ್ತರ ಸರಿಯಾಗಿದೆ.

***

**ಗುಂಡ (ತಿಂಡಿ ತಿನ್ನುತ್ತ):** ಸರ್ ಆ ಮೂಲೆಯಲ್ಲಿ ಕೆಂಪು ಶರ್ಟ್ ಹಾಕಿಕೊಂಡು ತಿಂಡಿ ತಿನ್ನುತ್ತಿದ್ದಾನಲ್ಲ, ಅವನು ತಿಂಡಿ ತಿಂತಿರೋದು ಇದು ಎರಡನೆಯ ಸಲ. ಏನ್ ಜನ ಅಲ್ವಾ?
**ಯಜಮಾನ:** ಹೌದಾ? ನಿನಗೆ ಹೇಗೆ ಗೊತ್ತು?
**ಗುಂಡ:** ಅವನು ಮೊದಲ ಪಂಕ್ತಿಯಲ್ಲಿ ನನ್ನ ಜೊತೆಯಲ್ಲೇ ತಿಂಡಿ ತಿಂದಿದ್ದ.

***

**ಟೀಚರ್:** ಗುಂಡ ಪರೀಕ್ಷೆಯಲ್ಲಿ ಪಾಸಾದರೆ ಏನು ಮಾಡ್ತೀಯಾ?
**ಗುಂಡ:** ಮುಂದಕ್ಕೆ ಓದ್ತೀನಿ.
**ಟೀಚರ್:** ಅಕಸ್ಮಾತ್ ಫೇಲಾದರೆ?
**ಗುಂಡ:** ನೀವು ಇಲ್ಲಿಂದ ಟ್ರಾನ್ಸ್‌ಫರ್ ಆಗ್ತೀರ.
**ಟೀಚರ್:** ಯಾಕೆ?
**ಗುಂಡ:** ನಮ್ಮಪ್ಪ ಎಜುಕೇಷನ್ ಮಿನಿಸ್ಟರ್.

***

**ಪತ್ನಿ:** ರೀ... ಅರ್ಧ ಗಂಟೆಯಿಂದ ಎದುರು ಮನೆಯವಳನ್ನೇ ನೋಡ್ತಾ ಇದೀರಲ್ಲ. ನನ್ನಲ್ಲಿ ಇಲ್ಲದ್ದು ಅವಳಲ್ಲಿ ಏನಿದೆ?
**ಗುಂಡ:** ಅದನ್ನೇ ನೋಡ್ತಾ... ಹುಡುಕ್ತಾ... ಇದೀನಿ ಕಣೇ.

***

**ಪೊಲೀಸ್ ಅಧಿಕಾರಿ:** ಇವನನ್ನು ಬಂದೀಖಾನೆ ಮಂತ್ರಿ ಮಾಡಲು, ಇವನಿಗೆ ಏನು ಅರ್ಹತೆ ಇದೆ?
**ಇನ್‌ಸ್ಪೆಕ್ಟರ್:** ಆತ ಜೀವನದ ಮುಕ್ಕಾಲು ಭಾಗವನ್ನು ಬಂದೀಖಾನೆಯಲ್ಲೇ ಕಳೆದಿದ್ದಾನಂತೆ. ಅಷ್ಟು ಅರ್ಹತೆ ಸಾಕಲ್ಲವೇ ಸರ್?

***

**ವೈದ್ಯ:** ಏನು ತೊಂದರೆ ನಿಮಗೆ? ಕೆಮ್ಮು, ಜ್ವರ, ನೆಗಡಿ, ಮೈ ಕೈ ನೋವು ಏನಾದರೂ ಇದೆಯಾ?
**ಗುಂಡ:** ಅಯ್ಯೋ ಹಾಗೇನೂ ಇಲ್ಲ. ನಾನು ಆರೋಗ್ಯವಾಗೇ ಇದ್ದೀನಿ.
**ವೈದ್ಯ:** ಮತ್ತೇಕೆ ಬಂದಿದ್ದೀರಿ?
**ಗುಂಡ:** ಆರು ತಿಂಗಳಿನಿಂದ ನೀವು ಬಾಡಿಗೆ ಕೊಟ್ಟಿಲ್ಲ. ಅದಕ್ಕೆ.

***

**ಗುಂಡ:** ನಿನ್ನ ಮುಖ ನೋಡಿಯೇ ನನಗೆ ಹೊಟ್ಟೆ ತುಂಬಿದ ಹಾಗೆ ಅನ್ನಿಸುತ್ತಿದೆ.

> ಕ್ರಿಕೆಟ್ ಮ್ಯಾಚ್ ಆಡುತ್ತಿದ್ದ ಶ್ರೀಕಾಂತ್ 12ನೇ ಆಟಗಾರನಿಗೆ ಕೋಕ್ ತರಲು ಹೇಳಿದ. ಕೋಕ್ ತಂದ ಅವನು ಮೊದಲು ಗವಾಸ್ಕರ್ ಬಳಿಗೆ ಹೋಗಿ ನಂತರ ಶ್ರೀಕಾಂತ್ ಹತ್ತಿರ ಬಂದ. ಶ್ರೀಕಾಂತ್ ಅವನಿಗೆ, 'ಕೋಕ್ ತರಲು ಹೇಳಿದ್ದು ನಾನು. ನೀನು ಗವಾಸ್ಕರ್ ಬಳಿಗೆ ಯಾಕೆ ಹೋಗಿದ್ದೆ' ಎಂದ. ಅದಕ್ಕೆ ಅವನು 'ಕೋಕ್ ಓಪನ್ ಮಾಡಲು ಓಪನರ್ ಬೇಕಿತ್ತು. ಅದಕ್ಕೆ' ಎಂದ!

**ಹೆಂಡತಿ:** ನೀವು ಹೀಗೇ ಹೇಳುತ್ತೀರೆಂದು ನಾನು ನನಗೊಬ್ಬಳಿಗೆ ಮಾತ್ರ ಅಡುಗೆ ಮಾಡಿಕೊಂಡಿದ್ದೀನಿ, ಗೊತ್ತಾ ಡಿಯರ್.

***


**ನ್ಯಾಯಾಧೀಶ:** ನೀನು ಓವರ್ ಸ್ಪೀಡಾಗಿ ಕಾರನ್ನು ಓಡಿಸಲಿಲ್ಲ ಅನ್ನುವುದಕ್ಕೆ ಸಾಕ್ಷಿ ಏನಿದೆ?
**ಗುಂಡ:** ಹೆಂಡತಿಯನ್ನು ಕರೆದುಕೊಂಡು ಬರಲು ಅವಳ ತವರು ಮನೆಗೆ ಹೋಗುತ್ತಿದ್ದೆ ಸ್ವಾಮಿ!

***

**ಗುಂಡ:** ಒಂದು ವೇಳೆ ನಾನು ಇದ್ದಕ್ಕಿದ್ದ ಹಾಗೆ ಸತ್ತು ಹೋದರೆ ಏನು ಮಾಡ್ತೀಯಾ?
**ಹೆಂಡತಿ:** ನಿಮ್ಮ ಜೊತೆ ನಾನೂ ಸಾಯ್ತೀನಿ.
**ಗುಂಡ:** ನನಗೆ ಗೊತ್ತಿತ್ತು ಕಣೇ! ನಿನ್ನನ್ನು ಮದುವೆ ಆಗೋವಾಗಲೇ ಸ್ವಾಮೀಜಿಯೊಬ್ಬರು ನೀನು ಸತ್ತರೂ ದರಿದ್ರ ನಿನ್ನ ಬೆನ್ನು ಹತ್ತಿ ಬರ್ತಾನೇ ಇರುತ್ತೆ ಅಂತ ಹೇಳಿದ್ದರು.

***

**ಹೆಂಡತಿ:** ಏನ್ರೀ ನಿಮ್ಮ ದೇಹ ಕಲ್ಲಿನ ತರಹ ಗಟ್ಟಿಯಾಗಿದೆ?
**ಗುಂಡ:** ಅದಕ್ಕೆ ನೀನೇ ಕಾರಣ.
**ಹೆಂಡತಿ:** ಅರೆ ನಾನು ಹೇಗೆ ಕಾರಣ?
**ಗುಂಡ:** ಕಲ್ಲು ಆರಿಸದ ಅಕ್ಕಿಯಲ್ಲಿ ಅನ್ನ




ಮಾಡುತ್ತೀಯಲ್ಲ, ಅದನ್ನು ತಿಂದು ತಿಂದು ನನ್ನ ದೇಹ ಹೀಗಾಗಿದೆ.

***

**ಹೆಂಡತಿ (ಫೋನಿನಲ್ಲಿ):** ರೀ... ಎಲ್ಲಿದ್ದೀರಾ?
**ಗುಂಡ:** ಆಫೀಸಿನಲ್ಲಿ ಕಣೇ ಯಾಕೆ?
**ಹೆಂಡತಿ:** ಏನಿಲ್ಲ ಕೆಲಸದವಳು ಓಡಿ ಹೋಗಿದ್ದಾಳೆ. ಅದಕ್ಕೆ ಕೇಳಿದೆ ಅಷ್ಟೆ.

***

**ಹೆಂಡತಿ:** ರೀ ಇಲ್ಲಿ ನೋಡಿ! ಕಂಪ್ಯೂಟರ್ ಸರಿಯಾಗಿ ಕೆಲಸ ಮಾಡುತ್ತಿಲ್ಲ.
**ಗುಂಡ:** ಲೇ ಅದು ಕಂಪ್ಯೂಟರ್ ಕಣೇ! ಗಂಡ ಅಲ್ಲ.

***

**ಹೆಂಡತಿ:** ರೀ... ಇಲ್ಲಿ ಕೇಳಿ! ಎಲ್ಲಿ ನಿಮಗೆ ಮರ್ಯಾದೆ ಸಿಗುವುದಿಲ್ಲವೋ ಅಲ್ಲಿಗೆ ಹೋಗಲೇಬೇಡಿ.
**ಗುಂಡ:** ಅಂದರೆ ನಾನು ಮನೆಗೂ ಬರೋದು ಬೇಡಾ ಅಂತ ಹೇಳ್ತಾ ಇದೀಯಾ?

***

**ಗೆಳೆಯ:** ಹಾಲಿನವರು ಪ್ರತಿಭಟನೆ ಮಾಡಿ ಹಾಲನ್ನು ರಸ್ತೆಗೆ ಸುರಿಯುತ್ತಾರೆ. ಟೊಮ್ಯಾಟೊ ಬೆಳೆಗಾರರು ಪ್ರತಿಭಟನೆ ಮಾಡಿ ಟೊಮ್ಯಾಟೊ ರಸ್ತೆಗೆ ಸುರೀತಾರೆ.
**ಗುಂಡ:** ನೀನು ಹೇಳುವುದು ಸರಿಯಾಗಿದೆ. ಬ್ಯಾಂಕಿನವರೂ ಪ್ರತಿಭಟನೆ ಮಾಡುತ್ತಾರೆ. ಆದರೆ ಏನನ್ನೂ ಸುರಿಯುವುದಿಲ್ಲ.

***

ಹಳೆಯ ಮಾರುತಿ ಕಾರೊಂದು ಐದು, ಹತ್ತು, ಹದಿನೈದು ಲಕ್ಷಕ್ಕೆ ಹರಾಜು ಆಗುತ್ತಿತ್ತು.
**ಗುಂಡ:** ಅಲ್ಲಾ ಈ ಜುಜುಬಿ ಕಾರಿಗೆ ಯಾಕೆ ಇಷ್ಟೊಂದು ಹರಾಜು ಕೂಗುತ್ತಿದ್ದಾರೆ?
**ದಲ್ಲಾಳಿ:** ಈ ಕಾರು ಹದಿನೈದು ಸಲ ಆಕ್ಸಿಡೆಂಟ್ ಆಗಿದೆ. ಪ್ರತಿಸಲ ಹೆಂಡತಿಯೇ ಸತ್ತಿದ್ದಾಳೆ. ಅದಕ್ಕೆ.

***

**ಗುಂಡ:** ದೇವರಿಗೆ ಮತ್ತು ವೈದ್ಯರಿಗೆ ಕೋಪ ಬರಿಸಬಾರದು.
**ಗೆಳೆಯ:** ಯಾಕೆ?
**ಗುಂಡ:** ಯಾಕಂದ್ರೆ ದೇವರಿಗೆ ಕೋಪ ಬಂದ್ರೆ ವೈದ್ಯರ ಹತ್ತಿರ ಕಳುಹಿಸುತ್ತಾನೆ. ವೈದ್ಯರಿಗೆ ಕೋಪ ಬಂದರೆ ದೇವರ ಹತ್ತಿರ ಕಳುಹಿಸುತ್ತಾರೆ.

***

**ಮಹಿಳೆ:** ಸರ್ ಇಲ್ಲಿಂದ ಕೆನರಾ ಬ್ಯಾಂಕ್ ಎಷ್ಟು ದೂರ ಇದೆ?
**ಗುಂಡ:** ಒಂದೂವರೆ ಕಿಲೋಮೀಟರ್.
**ಮಹಿಳೆ:** ಅಲ್ಲಿಗೆ ನಡೆದುಕೊಂಡು ಹೋಗಬಹುದೋ ಅಥವಾ ಆಟೊದಲ್ಲಿ ಹೋಗಬಹುದೋ?
**ಗುಂಡ:** ಏನೂ ಬೇಡ! ಸುಮ್ಮನೆ ನನ್ನ ಹಿಂದೆ ಕ್ಯೂನಲ್ಲಿ ನಿಂತುಕೊಳ್ಳಿ.

***

**ಗುಂಡ:** 25 ವರ್ಷದ ದಾಂಪತ್ಯದಲ್ಲಿ ನನ್ನ ಹೆಂಡತಿ ಇದುವರೆಗೂ ನನ್ನನ್ನು ಬೈದಿಲ್ಲ, ಹೊಡೆದಿಲ್ಲ.
**ಗೆಳೆಯ:** ಅರೆ ಹೌದಾ? ಅದು ಹೇಗೆ?
**ಗುಂಡ:** ಅವಳು ಪ್ರಾಣಿದಯಾ ಸಂಘದ ಸದಸ್ಯೆ.

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು